


ಹುಡುಗ: ನೀನು– ಇಷ್ಟೊಂದು ಸುಂದರವಾಗಿ ಹೇಗಿದ್ದೀಯಾ?
ಹುಡುಗಿ: ಮದ್ಯದ ಕಾರಣದಿಂದ.
ಹುಡುಗ: ನೀನು ಮದ್ಯಪಾನ ಮಾಡುತ್ತೀಯಾ?
ಹುಡುಗಿ: ಮೂರ್ಖ ಮದ್ಯಪಾನ ಮಾಡುವುದು ನಾನಲ್ಲ, ನೀನು! ನೀನು ಈಗ ನಶೆಯಲ್ಲಿರುವುದರಿಂದಲೇ ನಾನು ಸುಂದರವಾಗಿ ಕಾಣುವುದು.

★★★

ಒಬ್ಬ ವ್ಯಕ್ತಿ ಪರ್ವತ ಮಾರ್ಗದಲ್ಲಿ ಚಲಿಸುತ್ತಿದ್ದ. ಆಗ 'ನಿಲ್ಲು ಮುಂದೆ ಹೋಗಬೇಡ' ಎಂಬ ಧ್ವನಿ ಎಲ್ಲಿಂದಲೋ ಬಂತು. ಅವನು ಹಾಗೆಯೇ ಮಾಡಿದ. ಅವನು ನಿಲ್ಲುತ್ತಲೇ ಬೆಟ್ಟದ ಮೇಲಿನಿಂದ ದೊಡ್ಡ ಬಂಡೆಯೊಂದು ಉರುಳಿ ಬಂದು ಅವನ ದಾರಿಗೆ ಅಡ್ಡಲಾಗಿ ನಿಂತು ಬಿಟ್ಟಿತು. ಅವನು ಆ ಧ್ವನಿಗೆ ಧನ್ಯವಾದ ಅರ್ಪಿಸಿ ಮುಂದೆ ಸಾಗಿದ.

ಕೆಲವು ದಿವಸಗಳ ನಂತರ ಅವನು ರಸ್ತೆಗುಂಟ ಅದೆಲ್ಲಿಗೋ ಸಾಗಿದ್ದ. ಆಗ ಪುನಃ ಅದೇ ಧ್ವನಿ ಬಂತು 'ನಿಲ್ಲು' ಅವನು ನಿಂತುಕೊಂಡ. ಆಗ ಅವನ ಪಕ್ಕದಿಂದ ಕಾರೊಂದು ಹಾಯ್ದುಹೋಯ್ತು.

'ಪುನಃ ಪುನಃ ನನ್ನ ಪ್ರಾಣವನ್ನು ಉಳಿಸುತ್ತಿರುವ ನೀನಾರು?' ಎಂದು ಅವನು ಆ ಧ್ವನಿಯನ್ನು ಕೇಳಿದ.

'ನಾನು ನಿನ್ನನ್ನು ಕಾಪಾಡಲೆಂದೇ ನಿಯಮಿಸಿದ ದೇವದೂತ' ಎಂದಿತು ಆ ಧ್ವನಿ.

'ಹಾಗಾದರೆ ನೀನು ನನ್ನ ಮದುವೆ ನಡೆಯುವಾಗ ಎಲ್ಲಿದ್ದೆ? ಆಗೇಕೆ ನೀನು ನನಗೆ ಎಚ್ಚರಿಕೆಯನ್ನು ನೀಡಲಿಲ್ಲ?' ಎಂದು ಅವನು ಆ ಧ್ವನಿಗೆ ಕೇಳಿದ. ಆಗಲೂ ನಾನು ನಿನಗೆ ಎಚ್ಚರಿಕೆಯನ್ನು ನೀಡಿದ್ದೆ ಆದರೆ ಡಿ.ಜೆ.ಯ ಅಬ್ಬರದಲ್ಲಿ ಅದು ನಿನಗೆ ಕೇಳಿಸಲಿಲ್ಲ' ಎಂದಿತು ಆ ಧ್ವನಿ.

★★★

ಯುವತಿಯ ಮದುವೆಯಲ್ಲಿ ಅವಳ ಎಕ್ಸ್ ಬಾಯ್ ಫ್ರೆಂಡ್ ಬಂದ. ನೀನು ಯಾರು?' ಯುವತಿಯ ತಂದೆ ಕೇಳಿದ.

'ಸರ್, ನಾನು ಸೆಮಿಫೈನಲ್‌ನಲ್ಲಿ ಔಟ್ ಆಗಿದ್ದೆ. ಫೈನಲ್ ಮ್ಯಾಚ್ ವೀಕ್ಷಿಸಲು ಬಂದಿದ್ದೇನೆ' ಎಂದ ಯುವಕ.

★★★

ತಿಮ್ಮ ಒಮ್ಮೆ ದೇವರ ಬಳಿಗೆ ಹೋಗಿ 'ದೇವರೇ ನಮ್ಮ ಕೋಟಿ ವರ್ಷ ನಿಮಗೆ ಎಷ್ಟು ವರ್ಷವಾಗುತ್ತದೆ? ಎಂದು ಕೇಳಿದ.

'ವರ್ಷವಲ್ಲ, ನಿಮ್ಮ ಕೋಟಿ ವರ್ಷ ನಮ್ಮ ಒಂದು ಸೆಕೆಂಡಿಗೆ ಸಮ' ಎಂದ ದೇವರು.

'ನಮ್ಮ ಒಂದು ಕೋಟಿ ರೂಪಾಯಿ?' ತಿಮ್ಮ ಪುನಃ ಪ್ರಶ್ನಿಸಿದ.

'ನಮ್ಮ ಒಂದು ಪೈಸೆಗೆ ಸಮ' ಎಂದ ದೇವರು.

'ಹಾಗಾದರೆ ನನಗೆ ನಿಮ್ಮ ಒಂದು ಪೈಸೆ ಕೊಡುವಿರಾ?' ಎಂದು ತಿಮ್ಮ ದೇವರನ್ನು ಕೇಳಿದ.

'ಆಗಲಿ ಒಂದು ಸೆಕೆಂಡು ಬಿಟ್ಟು ಬಾ' ಎಂದ ದೇವರು!

(ಸಂಗ್ರಹ) **ಮುರಲೀಧರ ಕುಲಕರ್ಣಿ, ಬೀದರ್**

ಪ್ರಿಯಕರ: ಪ್ರಿಯೆ ನಿನ್ನನ್ನು ಬಿಟ್ಟು ನಾನು ಹೇಗೆ ಮನೆಗೆ ಹೋಗಲಿ?
ಪ್ರೇಯಸಿ: 20ನೇ ನಂಬರ್ ಬಸ್ಸು, ಇಲ್ಲವೇ ನಡೆದುಕೊಂಡು.

★★★

ಟೀಚರ್: ಬೆಂಕಿಯ ಹತ್ತಿರ ನಿಂತಿದ್ದ ಪ್ಲಾಸ್ಟಿಕ್ ಸರ್ಜನ್ ಏನಾದ?
ವಿದ್ಯಾರ್ಥಿ: ಕರಗಿ ಹೋದ.

★★★

ಅಪರಾಧಿ: ನೇಣು ಹಾಕಿಸಿಕೊಳ್ಳುವುದಕ್ಕೆ ಮುಂಚೆ ಒಂದು ಸಿಗರೇಟು ಸೇದಬಹುದಾ ಸಾರ್?
ಜೈಲರ್: ಬೇಡ! ಧೂಮಪಾನ ಆರೋಗ್ಯಕ್ಕೆ ಹಾನಿಕರ!

★★★

ಸರ್ವರ್: ಸಾರ್ ಒಂದು ಪ್ಲೇಟ್ ಇಡ್ಲಿ ವಡೆ, ಮಸಾಲೆ ದೋಸೆ, ಪೂರಿ, ಚೌಚೌಬಾತ್ ಇಷ್ಟೇ ಸಾಕಾ? ಇನ್ನೂ ಏನಾದರೂ ಬೇಕಾ?
ಗುಂಡ: ಅಯ್ಯೋ ಸಾಕಪ್ಪಾ! ನನ್ನನ್ನೇನು ಬಕಾಸುರ ಅಂದುಕೊಂಡೆಯಾ? ಮನೆಗೆ ಹೋಗಿ ಹಬ್ಬದೂಟ ಬೇರೆ ಮಾಡಬೇಕು.

(ಸಂಗ್ರಹ) **ಎಂ.ಕೆ.ಮಂಜುನಾಥ್, ಬೆಂಗಳೂರು**

